# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, 4 ಮತ್ತು 5ನೇ ಮಹಡಿ, 'ಈಸ್ಟ್ ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 001

ದೂರವಾಣಿ : 080-22265383 ಫ್ಯಾಕ್ಸ್ : 080-22267901

ವೆಬ್‌ಸೈಟ್ : www.kiadb.in ಇ-ಮೇಲ್ : ceoemkiadb@gmail.com


ಸಂ. ಕ.ಕೈ.ಪ್ರ.ಅ.ಮಂ/ಕೇ.ಕ/14589-III/1552/2021-22 ದಿನಾಂಕ: 29-04-2021 30/4

## : : ಸುತ್ತೋಲೆ : :

ವಿಷಯ : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉದ್ದಿಮೆದಾರರು ಭೂಬೆಲೆ ಮೊತ್ತವನ್ನು ಪಾವತಿಸುವಲ್ಲಿ ವಿಳಂಬವಾಗಿರುವ ಪ್ರಕರಣಗಳಲ್ಲಿ ದಿನಾಂಕ:01-04-2019 ರಿಂದ 28-02-2020ರ ಅವಧಿಗೆ ವಿಧಿಸಿರುವ ಬಡ್ಡಿ ಮನ್ನಾ ಮಾಡುವ ಬಗ್ಗೆ.

ಉಲ್ಲೇಖ :
1. ದಿನಾಂಕ:22-12-2020ರ ಕ.ಕೈ.ಪ್ರ.ಅ. ಮಂಡಳಿ ಸಭೆಯ ನಿರ್ಣಯ.
2. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪತ್ರ ಸಂ:ಸಿಐ 258 ಎಸ್‌ಪಿಕ್ಯೂ 2017 ದಿನಾಂಕ:31-03-2021.

****

ಕರ್ನಾಟಕ ರಾಜ್ಯ ಎಸ್.ಸಿ./ಎಸ್.ಟಿ ಎಂಟರ್‌ಪ್ರೈಸಸ್ ಅಂಡ್ ಇಂಡಸ್ಟ್ರೀಯಲಿಸ್ಟ್ ಅಸೋಸಿಯೇಷನ್ ಇವರ ದಿನಾಂಕ:02-05-2020 ಮತ್ತು 16-07-2020ರ ಮನವಿಯಲ್ಲಿ ಕೋರಿರುವಂತೆ, ದಿನಾಂಕ:19-11-2020 ರಂದು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಎಸ್.ಸಿ./ಎಸ್.ಟಿ ಅಸೋಸಿಯೇಷನ್ ಹಾಗೂ ಕೆ.ಐ.ಎ.ಡಿ.ಬಿ. ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಂಡಳಿ ವತಿಯಿಂದ ಹಂಚಿಕೆ ಮಾಡಲಾಗಿರುವ ನಿವೇಶನಗಳ ಭೂ ಬೆಲೆ ಪಾವತಿಯಲ್ಲಿ ವಿಳಂಬವಾಗಿರುವುದಕ್ಕೆ ದಿನಾಂಕ:01-04-2019 ರಿಂದ 28-02-2020ರ ವರೆಗೆ ವಿಧಿಸುವ ಬಡ್ಡಿ ರೂ.442.31 ಲಕ್ಷಗಳನ್ನು ಮನ್ನಾ ಮಾಡುವ ಬಗ್ಗೆ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಅದರಂತೆ, ದಿನಾಂಕ:22-12-2020 ರಂದು ನಡೆದ ಮಂಡಳಿ ಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉದ್ದಿಮೆದಾರರು ಭೂಬೆಲೆ ಮೊತ್ತವನ್ನು ಪಾವತಿಸುವಲ್ಲಿ ವಿಳಂಬವಾಗಿರುವ ಪ್ರಕರಣಗಳಲ್ಲಿ ದಿನಾಂಕ:01-04-2019 ರಿಂದ 28-02-2020 ರ ಅವಧಿಗೆ ವಿಧಿಸಿರುವ ಬಡ್ಡಿ ರೂ.442.31 ಲಕ್ಷಗಳನ್ನು ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಮನ್ನಾ ಮಾಡಲು ಹಾಗೂ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಸಮಾಜ ಕಲ್ಯಾಣ ಇಲಾಖೆ ಇವರಿಂದ ಅನುದಾನ ನೀಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ನಿರ್ಣಯಿಸಲಾಗಿರುತ್ತದೆ. ಮಂಡಳಿ ಸಭೆಯ ನಿರ್ಣಯದನ್ವಯ ದಿನಾಂಕ:28-01-2021ರ ಪತ್ರದ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಸರ್ಕಾರವು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪತ್ರ ಸಂ:ಸಿಐ 258 ಎಸ್‌ಪಿಕ್ಯೂ 2017 ದಿನಾಂಕ:31-03-2021ರ ಪತ್ರದ ಮೂಲಕ, ದಿನಾಂಕ:01-04-2019 ರಿಂದ 28-02-2020 ರವರೆಗೆ ಹಂಚಿಕೆದಾರರು ಮಂಡಳಿಗೆ ಪಾವತಿಸಬೇಕಾದ ಬಾಕಿ ಮೊತ್ತಕ್ಕೆ ಪಾವತಿಸಲು ವಿಳಂಬವಾದ ಅವಧಿಗೆ ಬಡ್ಡಿಯನ್ನು ಮೊದಲು ಕೆ.ಐ.ಎ.ಡಿ.ಬಿ. ಯು ಮನ್ನಾ ಮಾಡಲು ಕ್ರಮವಹಿಸಿ, ಮನ್ನಾ

ಮಾಡಿರುವ ಕುರಿತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಮಾಹಿತಿ ನೀಡಿ, 45 ದಿನಗಳೊಳಗಾಗಿ ಅಸಲನ್ನು ಕೆ.ಐ.ಎ.ಡಿ.ಬಿ.ಗೆ ಪಾವತಿಸುವಂತೆ ತಿಳಿಸಲು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿರುತ್ತದೆ. ಸದರಿ ಪತ್ರದ ಪ್ರತಿ ಲಗತ್ತಿಸಿದೆ.

ಸರ್ಕಾರದ ಸದರಿ ನಿರ್ದೇಶನದನ್ವಯ ಕ್ರಮವಹಿಸಲು ಹಾಗೂ ಈ ಎಲ್ಲಾ ಪ್ರಕರಣಗಳಲ್ಲಿ ದಿನಾಂಕ : 01-04-2019 ರಿಂದ 28-02-2020ರ ಅವಧಿಗೆ ಬಡ್ಡಿ ರಹಿತವಾಗಿ ಬಾಕಿ ಮೊತ್ತವನ್ನು ಪಾವತಿಸಲು 45 ದಿನಗಳ ಕಾಲಾವಕಾಶ ನೀಡಿ ಬೇಡಿಕೆ ಪತ್ರವನ್ನು 30 ದಿನಗಳೊಳಗಾಗಿ ಕಳುಹಿಸಲು ಹಾಗೂ ಸದರಿ ಫಲಾನುಭವಿಗಳ ಪಟ್ಟಿಯನ್ನು ಕೂಡಾ ಸಲ್ಲಿಸಲು ಸೂಚಿಸಲಾಗಿದೆ.

ಸದರಿ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ. ತಪ್ಪಿದಲ್ಲಿ, ಸಂಬಂಧಪಟ್ಟ ಅಧಿಕಾರಿ/ನೌಕರರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಹಾಗೂ ಕಾರ್ಯನಿರ್ವಾಹಕ ಸದಸ್ಯರು

ಗೆ,

1. ಜಂಟಿ ನಿರ್ದೇಶಕರು, ಕ.ಕೈ.ಪ್ರ.ಅ.ಮಂ, ಕೇಂದ್ರ ಕಛೇರಿ, ಬೆಂಗಳೂರು.
2. ಹಣಕಾಸು ನಿಯಂತ್ರಣಾಧಿಕಾರಿಗಳು, ಕ.ಕೈ.ಪ್ರ.ಅ.ಮಂ, ಕೇಂದ್ರ ಕಛೇರಿ, ಬೆಂಗಳೂರು.
3. ಕಾರ್ಯದರ್ಶಿ-1, ಕ.ಕೈ.ಪ್ರ.ಅ.ಮಂ, ಕೇಂದ್ರ ಕಛೇರಿ ಬೆಂಗಳೂರು.
4. ಕಾರ್ಯದರ್ಶಿ-2, ಕ.ಕೈ.ಪ್ರ.ಅ.ಮಂ, ಕೇಂದ್ರ ಕಛೇರಿ ಬೆಂಗಳೂರು
5. ಕಾರ್ಯಪಾಲಕ ಅಭಿಯಂತರು-1, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಬೆಂಗಳೂರು.
6. ಕಾರ್ಯಪಾಲಕ ಅಭಿಯಂತರು-2, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಬೆಂಗಳೂರು
7. ಕಾರ್ಯಪಾಲಕ ಅಭಿಯಂತರು-3, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಬೆಂಗಳೂರು
8. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ತುಮಕೂರು.
9. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಮೈಸೂರು.
10. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಹಾಸನ.
11. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಮಂಗಳೂರು.
12. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ದಾವಣಗೆರೆ.
13. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಧಾರವಾಡ.
14. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಬೆಳಗಾವಿ.
15. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಬಳ್ಳಾರಿ.
16. ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿ, ಕಲಬುರ್ಗಿ.
17. ಎಲ್ಲಾ ಸಹಾಯಕ ಕಾರ್ಯದರ್ಶಿಗಳು, ಕ.ಕೈ.ಪ್ರ.ಅ.ಮಂಡಳಿ ಕೇಂದ್ರ ಕಛೇರಿ ಹಾಗೂ ವಲಯ ಕಛೇರಿಗಳು.
18. ಕಛೇರಿ ಪ್ರತಿ.